ಕೆಡುವುದಲ್ಲದೆ ವನವನ್ನೇ ಕೆಡಿಸಿತಂತೆ. ಹಾಗಾಯ್ತು ನಿನ್ನ ಮೊಮ್ಮಗನ ಕಥೆ

`ಮೊನ್ನೆ ನನ್ನ ಮೊಮ್ಮಗ ಮನೆಗೆ ಬರಲೇ ಇಲ್ಲ. ಕೇಳಿದರೆ ಅದೇನೋ ಶಿಬಿರವಂತೆ ನಿನ್ನ ಮೊಮ್ಮಗನೇ ನಡೆಸುವುದಂತೆ. ಅಲ್ಲಿಯೇ ಇದ್ದನಂತೆ'.

`ನನ್ನ ಮಗ ಇವತ್ತು ಕೆಲಸಕ್ಕೆ ಹೋಗಲೇ ಇಲ್ಲ. ಕೇಳಿದರೆ ನಾನು ದುಡಿದು ಅವರಿಗೆ ಹಣ ಮಾಡಲು ಅವಕಾಶ ಮಾಡಿ ಕೊಡುವ ಆ ಕೆಲಸ ಬೇಡ ನನಗೆ. ಇನ್ನು ಮೇಲಿಂದ ಆ ಕೆಲಸಕ್ಕೆ ಹೋಗುವುದಿಲ್ಲ. ನಿನ್ನೆಯೇ ರಾಜೀನಾಮೆ ಅವನ ಮುಖದ ಮೇಲೆ ಎಸೆದು ಬಂದಿದ್ದೇನೆ ಎಂದು ಹೇಳಿದ. ಅದೇನೋ ನಿನ್ನ ಮೊಮ್ಮಗನ ಜೊತೆ ಸೇರಿದ್ದಾನಂತೆ.'

`ಇನ್ನು ಮೇಲಿಂದ ನಮ್ಮ ಮನೆಯವರೂ ಸೇರಿದಂತೆ ಯಾರೂ ಗದ್ದೆ ಕೆಲಸಕ್ಕೆ ಹೋಗುವುದಿಲ್ಲವಂತೆ. ಇವರು ದುಡಿದುದನ್ನು ತಿನ್ನುವ ಆ ಗದ್ದೆಯ ಯಜಮಾನರೆಲ್ಲ ಉಪವಾಸ ಬೀಳುವಂತೆ ಮಾಡುತ್ತಾರಂತೆ. ಇದೆಲ್ಲ ನಿನ್ನ ಮೊಮ್ಮಗನದ್ದೇ ಚಿತಾವಣೆಯಂತೆ. ನಾಳೆಯಿಂದ ನಾವು ಏನು ತಿನ್ನುವುದೋ ಗೊತ್ತಾಗುತ್ತಿಲ್ಲ ಅಜ್ಜಿ...

`ನಾಳೆಯಿಂದ ನಾವೆಲ್ಲ ಸೇರಿ ಸರಕಾರೀ ಆಫೀಸಿನೆದುರಿಗೆ, ಬೇರೆ ಬೇರೆ ಕಚೇರಿಯೆದುರಿಗೆ ಪಿಕೆಟ್ ಮಾಡುತ್ತೇವೆ.

`ಮೊನ್ನೆ ಮೊನ್ನೆ ಮದುವೆ ಮಾಡಿದ್ದಷ್ಟೆ. ಹೊಸ ಹೆಂಡತಿ ಮನೆಯಲ್ಲಿದ್ದಾಳೆನ್ನುವುದನ್ನೂ ಮರೆತು ನನ್ನ ಮಗ ರಾತ್ರಿಯೆಲ್ಲ ಅಲ್ಲಿ ಕಾಡಿನಲ್ಲಿ ನಿನ್ನ ಮೊಮ್ಮಗ ನಡೆಸುವ ಸಭೆಯಲ್ಲಿ ಕಳೆಯುತ್ತಿದ್ದಾನಂತೆ.'

ಎಲ್ಲಕ್ಕಿಂತ ಹೆಚ್ಚು ಅಜ್ಜಿಯನ್ನು ಕಂಗೆಡಿಸಿದ್ದು `ಅಜ್ಜಿ.. ನಾನು ಎರಡು ದಿನಗಳಿಂದ ಮನೆಯಲ್ಲಿ ಒಲೆಯನ್ನು ಹಚ್ಚಲೇ ಇಲ್ಲ. ನಾನೂ ನನ್ನ ಎರಡು ಮಕ್ಕಳೂ ಉಪವಾಸ ... ಅದೇನೋ ಕ್ರಾಂತಿಯಂತೆ. ಅದಾದರೆ ನಾವೆಲ್ಲ ಸುಖವಾಗಿ ಉಣ್ಣಬಹುದಂತೆ.. ಅದನ್ನೇ ಹೇಳುತ್ತಿದ್ದ ನನ್ನ ಗಂಡ ವಾರದಿಂದ ಕೆಲಸಕ್ಕೂ ಹೋಗದೆ ಅದೇನೋ ಸಭೆಗಳಿಗೆ ಹೋಗುತ್ತಿದ್ದಾನೆ ಎಂದು ನಾಲ್ಕು ಮನೆಗಳಾಚೆಯ ಸುಬ್ಬಿ ಹೇಳಿದ್ದು. ಈ ವೆಂಕಜ್ಜಿಯೇ ಆ ಸುಬ್ಬಿಗೆ ಮದುವೆ ಮಾಡಿದ್ದು. ಅದೆಲ್ಲೋ ಅಲೆಯುತ್ತಿದ್ದ ಆ ಶಂಭುವನ್ನು ತಾನು ಪಿರೀತಿ ಮಾಡುತ್ತಿದ್ದೇನೆ ಎಂತಲೂ ಅವ ಮಾತ್ರ ತನಗೆ ನಂಬಿಸಿ ಕೈ ಕೊಟ್ಟು ಹೋಗುವ ಆಲೋಚನೆಯಲ್ಲಿದ್ದನೆಂತಲೂ ಒಂದು ಧಾರಾಕಾರ ಮಳೆ ಸುರಿಯುತ್ತಿದ್ದ ರಾತ್ರಿ ಆಕೆ ಬಂದು ಗೋಳಾಡಿದಾಗ ಸುರಿಯುವ ಮಳೆಯನ್ನೂ ಲೆಕ್ಕಿಸದೆ ಅವನಿದ್ದ ಜಾಗವನ್ನು ಹುಡುಕಿಕೊಂಡು ಹೋಗಿ ದಬಾಯಿಸಿ ಈಕೆಯನ್ನು ಮದುವೆ ಮಾಡಿಕೊಳ್ಳುವಂತೆ ಮಾಡಿದ್ದು ವೆಂಕಜ್ಜಿ. ಈಗ ಅದೇ ಸುಬ್ಬಿ `ಅಜ್ಜೀ ಆವತ್ತು ನನ್ನ ಸಂಸಾರ ನೆಟ್ಟಗೆ ಮಾಡಿದೆ. ಇವತ್ತು ನಿನ್ನ ಮೊಮ್ಮಗನೇ ಅದಕ್ಕೆ ಕೊಳ್ಳಿಯಿಡುತ್ತಿದ್ದಾನೆ ಎಂದು ಗೋಳಿಡುತ್ತಿದ್ದಾಳೆ.

ಏನೆಂದು ಹೇಳೀತು ಪಾಪ ಆ ಅಜ್ಜಿ! ಚಿಂತೆ ಹತ್ತಿತ್ತು ಆಕೆಗೆ. ತನ್ನ ಮೊಮ್ಮಗ ಬಹಳ ದೊಡ್ಡ ಮನುಷ್ಯನಾಗಬೇಕೆಂದೇನೂ ಆಸೆಯಿರಲಿಲ್ಲ ಆ ಅಜ್ಜಿಗೆ. ಊರ ಶಾಲೆಯಲ್ಲಿ ಒಬ್ಬ ಮೇಷ್ಟ್ರು. ಮತ್ತೆ ಊರಿನಲ್ಲಿ ಮರ್ಯಾದೆಯಾಗಿ ಬಾಳುವ ಒಬ್ಬ ಮನುಷ್ಯ. ಮದುವೆ ಮಾಡಿಕೊಂಡು ವಂಶೋದ್ಧಾರಕನಾದ ಒಂದು ಮಗು. ಮದುವೆ ಮಾಡಿದ ಮೇಲೆ ಹೆಚ್ಚು ದಿನ ಬದುಕಲಾರ ಎನ್ನುವ ಮನೆತನದ ಶಾಪವಿದ್ದರೂ ಆಸೆ. ವಂಶ ಬೆಳೆಯಬೇಕಲ್ಲ.

ಆದರೆ ಈ ಮೊಮ್ಮಗ ಹೀಗೆ ಲೋಕ ಕಂಟಕನಾಗುತ್ತಾನೆಂದು ತಿಳಿದಿದ್ದರೆ ಹುಟ್ಟಿದ ಕೂಡಲೇ ಕತ್ತು ಹಿಚುಕಿ ಬಿಡುತ್ತಿದ್ದೆ ಎನ್ನುವಷ್ಟು ಕೋಪ ಈಗ. ದಿನ ಬೆಳಗಾದರೆ ದೂರುಗಳು. ಜನ ಇನ್ನೂ ಏನೇನೋ ಮಾತಾಡಿಕೊಳ್ಳುತ್ತಿದ್ದರು. `ಈ ಮೊಮ್ಮಗನಿಗೆ ಬೇರೆ ಬೇರೆ ರಾಜ್ಯಗಳಲ್ಲಿರುವ ತೀವ್ರವಾದಿಗಳ ಸಂಪರ್ಕವೂ ಇದೆಯಂತೆ. ತೀವ್ರವಾದಿಗಳೆಂದರೆ ಎದುರಿಗೆ ಸಿಕ್ಕವರನ್ನು ದಾಕ್ಷಿಣ್ಯವೇ ಇಲ್ಲದೆ ಇರಿದು ಕೊಲ್ಲಲೂ ಹೇಸದವರಂತೆ. ಅಂತಹವರು ಕೆಲವರು ರಾತ್ರೋ ರಾತ್ರಿ ಬಂದು ಈ ಶಿಬಿರಗಳಲ್ಲಿ ಭಾಗವಹಿಸಿ ತಮ್ಮ ಯೋಜನೆಗಳನ್ನು ಇವರಿಗೆ ವಿವರಿಸಿ `ನಮ್ಮ ಸಂಘಟನೆಯಲ್ಲಿ ಮುಂದುವರಿಯಬೇಕೆಂದರೆ ನೀವೂ ಅಂತಹ ಕೆಲಸ ಮಾಡಲೇಬೇಕು ಎಂದು ಇವರಿಗೆ ಹೇಳಿ ಅದೇ ರಾತ್ರಿಯಲ್ಲಿ ಮಾಯವಾಗುತ್ತಿದ್ದರಂತೆ. ಅದಕ್ಕಾಗಿಯೇ ಇವರಲ್ಲಿ ಕೆಲವರು ಈಗ ಬಾಂಬು ತಯಾರಿಕೆಯಲ್ಲಿಯೂ ತರಬೇತಿ ಪಡೆದಿದ್ದಾರಂತೆ. ಅಂತಹವರಲ್ಲಿ ಈ ಮೊಮ್ಮಗನೇ ಮುಂದಂತೆ. ಅಷ್ಟೇ ಅಲ್ಲ ಇನ್ನು ಕೆಲವೇ ದಿನಗಳಲ್ಲಿ ಊರಿನ ಶಾಲೆ ಮತ್ತು ಪೋಸ್ಟಾಫೀಸಿನ ಜೊತೆಗೆ ಒಂದೆರಡು ಮನೆಗಳನ್ನಾದರೂ ಉಡಾಯಿಸುವ ಯೋಜನೆಯಿದೆ. ಅದರಲ್ಲಿ ನಮ್ಮ ಪಟೇಲರ ಉಪ್ಪರಿಗೆ



ಮನೆಯಂತೂ ಗ್ಯಾರಂಟಿ ಬಿಡಿ ಎಂದು ಹೇಳಿ ಪಟೇಲರ ನಿದ್ದೆಯನ್ನು ಕೆಡಿಸಿದ್ದರು. ಕೇಳಿಸಿಕೊಂಡ ಅಜ್ಜಿ ಇದ್ದದ್ದೂ ಕಂಗಾಲು.

ಮನೆಗೆ ಬರುವುದನ್ನೇ ಕಡಿಮೆ ಮಾಡಿದ್ದ ಮೊಮ್ಮಗನ ಸಾಹಸದ ಕತೆಗಳೆಲ್ಲ ಮುದುಕಿಯ ಕಿವಿಯ ಮೇಲೆ ಬೀಳುತ್ತಿದ್ದುವು. ಆಕೆ ಕೇಳಬೇಕೆಂದೇ ಹೇಳಲು ಪ್ರಾರಂಭಿಸಿದ್ದ ಮಂದಿ ಆ ಕತೆಗಳನ್ನು ಹೇಳುತ್ತ ಹೇಳುತ್ತ ತಾವೇ ಅವನಿಗೆ ಹೆದರ ತೊಡಗಿದ್ದರು. ಯಾಕಪ್ಪಾ ನಮ್ಮ ಊರಿನಲ್ಲಿ ಇಂಥವನೊಬ್ಬ ಹುಟ್ಟಿದ ಎಂದು ಅಲವತ್ತುಕೊಂಡು ಸುತ್ತ ಮುತ್ತ ಮತ್ತು ಮನೆಯೊಳಗೆ ಎಲ್ಲಿಯೂ ಆ ಮೊಮ್ಮಗನಿಲ್ಲ ಎನ್ನುವುದನ್ನು ಖಾತ್ರಿ ಮಾಡಿಕೊಂಡು `ವೆಂಕಜ್ಜೀ.. ಎಂತಹ ಒಬ್ಬ ಮೊಮ್ಮಗನನ್ನು ತಯಾರು ಮಾಡಿದ್ದೀಯ.. ಎಂದು ಆಕೆಯ ಹತ್ತಿರ ತಮ್ಮ ದೂರು ಹೇಳಿಕೊಳ್ಳುತ್ತಿದ್ದರು. ಬೇಡವೆಂದರೂ ಕಿವಿಗೆ ಬೀಳುವ ಆ ಕತೆಗಳು, ಕೇಳುವ ಪ್ರಶ್ನೆಗಳು ಮುದುಕಿಯ ನೆಮ್ಮದಿಯನ್ನು ಹಾಳು ಮಾಡಿದ್ದುವು. ಮಾಷ್ಟ್ರಾಗಬೇಕಾಗಿದ್ದ ಮೊಮ್ಮಗ ಹೀಗಾದದ್ದು ಆಕೆಗೆ ಸಹಿಸಲು ಸಾಧ್ಯವಾಗಿರಲಿಲ್ಲ. ಹೆಡ್ಡತನವೇ ಮೂರ್ತಿವೆತ್ತಂತೆ ಇದ್ದ ಆಕೆಯ ಸೊಸೆಯಂತೂ ಮಗನ ಬಗ್ಗೆ ಏನು ಆಲೋಚಿಸಬೇಕೆಂದೂ ತಿಳಿಯದೆ ಕಂಗಾಲಾಗಿದ್ದಳು.

ಕಾಲೇಜಿಗೆ ಹೋಗುತ್ತೇನೆಂದಾಗಲೇ `ದೂರದ ಊರಿಗೆ ಹೋಗುತ್ತಾನಲ್ಲ ಮೊಮ್ಮಗ ಕೆಟ್ಟು ಹೋಗಬಹುದು. ಒಂದು ಮದುವೆ ಮಾಡಿ ಕಳುಹಿಸು ಎಂದಿದ್ದರು ಜನ. ವಯಸ್ಸಿಗೆ ಬಂದ ಹೆಣ್ಣಿದ್ದ ದೂರದ ಸಂಬಂಧದವ ರೊಬ್ಬರಂತೂ ತಮ್ಮ ಮಗಳನ್ನು ಅವನೊಂದಿಗೆ ಕಳುಹಿಸಲು ಆಗಲೇ ತಯಾರಾಗಿದ್ದರು. ಮುದುಕಿಯೂ ಆಲೋಚಿಸಿದ್ದಿತ್ತು `ಹೌದು ತನ್ನನ್ನು ಮದುವೆಯಾಗುವಾಗ ತನ್ನ ಗಂಡನಿಗೆ ಹದಿನೆಂಟೋ ಇಪ್ಪತ್ತೋ. ಆಗಲೇ ಮೈನೆರೆದಿದ್ದ ತನ್ನನ್ನು ಮನೆತುಂಬಿಸಿಕೊಂಡ ದಿನವೇ ಆ ಪೋರ ಏನೆಲ್ಲ ಆಟ ಆಡಿದ್ದ. ಹಾಗಾಗಿಯೇ ತಾನೇ ತನಗೆ ನೀರು ನಿಂತದ್ದು. ತನ್ನ ಮಗನಿಗೂ ತಾನು ಹದಿನೆಂಟಕ್ಕೇ ಮದುವೆ ಮಾಡಿದ್ದು . ಮದುವೆಯಾದ ವರ್ಷಕ್ಕೇ ಇವ ಹುಟ್ಟಿದ್ದನಲ್ಲವೇ.. ಇವನಿಗೂ ಕುತ್ತಿಗೆಗೊಂದು ಕಟ್ಟಬಹುದೇನೋ.. ಎಂದು. ಆದರೆ ಆಗ ಈ ಮೊಮ್ಮಗ ಅದಕ್ಕೆಲ್ಲ ಸೊಪ್ಪು ಹಾಕಿರಲಿಲ್ಲ. ಅದಕ್ಕಿಂತ ಹೆಚ್ಚಾಗಿ ಕುಟುಂಬಕ್ಕಂಟಿದ ಶಾಪ ಅಜ್ಜಿಯನ್ನು ಹೆದರಿಸಿತ್ತು.

***

ಮೊಮ್ಮಗನ ಬಗ್ಗೆ ದೂರು ಕೇಳಿ ಸಾಕಾಗಿದೆ ಅಜ್ಜಿಗೆ. ಮೊಮ್ಮಗನ ಜಾತಕ ನೋಡಿದವರು `ನಿಮ್ಮ ವಂಶಕ್ಕಂಟಿದ ಶಾಪ ನಿಮ್ಮ ಮೊಮ್ಮಗನನ್ನೂ ಬಿಡೋದಿಲ್ಲ. ಅವನ ಆಯುಷ್ಯ ಏನಿದ್ದರೂ ಮದುವೆಯಾಗಿ ಹೆಂಡತಿಯ ಹೊಟ್ಟೆಯಲ್ಲಿ ಒಂದು ಜೀವ ಹೊರೆಯುವವರೆಗೆ ಮಾತ್ರ.. ಎಂದು ಹೇಳಿದ್ದನ್ನೇ ಮನಸ್ಸಿನಲ್ಲಿಟ್ಟುಕೊಂಡು ಮೊಮ್ಮಗನ ಮದುವೆಯನ್ನು ಮುಂದೆ ತಳ್ಳುತ್ತ ಬಂದಿದ್ದ ಅಜ್ಜಿಯನ್ನು ಈಗ ಯಾವ ಹೆದರಿಕೆಯೂ ಬಾಧಿಸಲಿಲ್ಲ. ಅವನ ಬಗ್ಗೆ ಇನ್ನೂ ದೂರುಗಳನ್ನು ಕೇಳಲು ತಯಾರಿರಲಿಲ್ಲ ಆಕೆ. ಮನಸ್ಸನ್ನು ಗಟ್ಟಿ ಮಾಡಿಕೊಂಡಳು.

ಬಾದರಾಯಣ ಸಂಬಂಧದ ಹೆಳೆ ಹೇಳಿಕೊಂಡು ನಿನ್ನ ಮೊಮ್ಮಗನಿಗೆ ನಮ್ಮ ಮಗಳೇ ಎಂದು ನಾಲ್ಕಾರು ವರ್ಷಗಳಿಂದ ಒಂದೇ ಸವನೆ ವರಾತ ಹಚ್ಚುತ್ತಿದ್ದ ತುಸು ದೂರದ ಊರಲ್ಲಿದ್ದ ಸಂಬಂಧಿಗಳ ಮನೆಗೆ ಅದೇ ದಿನವೇ ಹೋದದ್ದೇ ಅಲ್ಲದೆ `ನಿಮ್ಮ ಮಗಳನ್ನು ನನ್ನ ಮೊಮ್ಮಗನಿಗೆ ತಂದುಕೊಳ್ಳಲು ನನ್ನ ಒಪ್ಪಿಗೆಯಿದೆ. ಕೂಡಲೇ ಇರುವ ಮುಹೂರ್ತದಲ್ಲಿ ಮದುವೆಯ ವಾಲಗ ಊದಿಸಿಯೇ ಬಿಡುವ ಎಂದು ಹೇಳಿ ಮದುವೆಯ ಮಾತೆಲ್ಲವನ್ನು ಅಲ್ಲಿಯೇ ಮುಗಿಸಿದ ವೆಂಕಜ್ಜಿ ಹಿಂತಿರುಗಿ ಬರುವಾಗ ದಾರಿಯುದ್ದಕ್ಕೂ ಕಣ್ಣೀರು ಸುರಿಸುತ್ತಲೇ ಇತ್ತು.